

ಎಂದಿದ್ದಾರೆ' ಎಂದು ಹೆದರಿದ ಧಾಟಿಯಲ್ಲಿ ಹೇಳಿದರು. ನಾನು ಆ ದಿನ ಹೊರಡಲಿಲ್ಲ.

ಮರುದಿನ ಪುಟ್ಟಣ್ಣನವರ ಬಳಿಗೆ ಹೋದೆ. ವರ್ಷದ ಹಿಂದೆ ಫೋನ್ ಮಾಡಿದ್ದನ್ನೇ ಮತ್ತೆ ನೆನಪಿಸಿದರು. ನಾನು ಸ್ನೇಹಿತರು ಛೇಡಿಸಿದ್ದನ್ನು ಹೇಳಿದಾಗ, 'ಅಲ್ವಾ' ಅಂತ ನಗುತ್ತಲೇ ಪ್ರತಿಕ್ರಿಯಿಸಿದರು. 'ದೊಡ್ಡೇರಿ ವೆಂಕಟಗಿರಿರಾವ್ ಅವರ ಕಾದಂಬರಿ ಚೆನ್ನಾಗಿದೆ. ಅದನ್ನು ಸಿನಿಮಾ ಮಾಡಬೇಕು ಎಂದುಕೊಂಡಿದ್ದೇವೆ. ಅದಕ್ಕೆ ಡೈಲಾಗ್ ಬರೆಯಬೇಕು. ಲವ್ವು ಡವ್ವು ಎಂದಷ್ಟೇ ಅಲ್ಲ; ನನ್ನ ಪ್ರೇಮಕಥೆಯಲ್ಲಿ ಅಧ್ಯಾತ್ಮದ ಟಚ್ ಇರಬೇಕು' ಎಂದು ಅವಕಾಶ ಮುಂದಿಟ್ಟರು. ಕಾದಂಬರಿಯನ್ನು ತೆಗೆದುಕೊಂಡು, ಅದನ್ನು ಓದಿ, ಮುಂದಿನ ವಾರ ರಜೆಯ ಹೊತ್ತಿಗೆ ಸ್ಕ್ರಿಪ್ಟ್ ಜತೆಗೇ ಮರಳುವುದಾಗಿ ತಿಳಿಸಿ ಬಂದೆ.

ಡೈಲಾಗ್ ಬ್ರೀಫ್ ಮಾಡಲೆಂದು ಹೋದಾಗ ಅಲ್ಲೊಂದು ದೊಡ್ಡ ಸಭೆ. ನಟಿ ಪದ್ಮಾ ವಾಸಂತಿ ಕೂಡ ಅಲ್ಲಿದ್ದರು. ಬ್ರೀಫ್ ಮಾಡಿದೆ. ಖುಷಿಪಟ್ಟರು. ಆದರೆ, ಸ್ಪಾಟ್‌ನಲ್ಲಿ ಡೈಲಾಗ್ ಬದಲಿಸುವುದು ತಮ್ಮ ಜಾಯಮಾನ ಎಂದು ಹೇಳಿದರು. 'ಅದು ಸ್ಟ್ರೆಂತೋ, ವೀಕ್‌ನೆಸ್ಸೋ ಗೊತ್ತಿಲ್ಲ. ಕರೆದಾಗ ಸ್ಪಾಟ್‌ಗೆ ಬರಬೇಕು' ಎಂದರು. ಒಪ್ಪಿದೆ.

◆ **ಪುಟ್ಟಣ್ಣ, ಸಿದ್ದಲಿಂಗಯ್ಯ ಇಬ್ಬರೂ ದಿಗ್ಗಜ ನಿರ್ದೇಶಕರ ಗರಡಿಯಲ್ಲಿ ನೀವು ಕಲಿತದ್ದು ಏನು?**

ನಾನು ಮೊದಲು ಬಹಳ ಜಿಗುಟಾಗಿದ್ದೆ. ಕಾದಂಬರಿಯಲ್ಲಿ ಯಾರಾದರೂ ಸ್ವಲ್ಪ ಬದಲಿಸಿದರೂ